













# ಮೈಸೂರು ಟಾಯ್ಸ್
## ಮರೆಯಲಾಗದ ನೆನಪು

■ ಎನ್. ಜಗನ್ನಾಥ ಪ್ರಕಾಶ್



‘ಮೈಸೂರು ಟಾಯ್ಸ್’ ರೂವಾರಿ ಎಂ. ವೀರಪ್ಪ

ಬೊಂಬೆಗಳನ್ನು ಸಂಗ್ರಹಿಸುವ ಹವ್ಯಾಸ ಸರ್ವವ್ಯಾಪಿ. ಪುಟಾಣಿಗಳಲ್ಲಿ ಬೊಂಬೆ ಸಂಗ್ರಹ ಹೆಚ್ಚು. ಆಟಿಕೆ ಬೊಂಬೆಗಳೇ ಬೇರೆ, ಪ್ರದರ್ಶನಗೊಳ್ಳುವುದಕ್ಕಾಗಿ ತಯಾರಾಗುವ ಬೊಂಬೆಗಳೇ ಬೇರೆ. ಈಗೀಗಂತೂ ಬೊಂಬೆಗಳೆಂದರೆ ತಕ್ಷಣ ನೆನಪಾಗುವುದು ಚನ್ನಪಟ್ಟಣದ ರಂಗುರಂಗಿನ ತರಹೇವಾರಿ ಬೊಂಬೆಗಳು. ಕಿನ್ನಾಳದ ಗೊಂಬೆಗಳು, ಗೋಕಾಕದ ಆಟಿಕೆಗಳೂ ಜನಪ್ರಿಯವೇ. ಆದರೆ ಚನ್ನಪಟ್ಟಣದ ಬೊಂಬೆಗಳೇ ಹೆಚ್ಚಿನ ಗಮನ ಸೆಳೆಯುವುದು. ಅವುಗಳದು ಅಂತರರಾಷ್ಟ್ರೀಯ ಖ್ಯಾತಿ.

ಬೊಂಬೆ ಹಬ್ಬಕ್ಕೆ ಹೆಚ್ಚಿನ ಮಹತ್ವ ಇರುವ ನವರಾತ್ರಿಯಲ್ಲಿ ಮೈಸೂರು ಸುದ್ದಿಯಲ್ಲಿರುತ್ತದೆ. ಸಾಂಸ್ಕೃತಿಕ ನಗರದ ಹಲವೆಡೆ ನೋಡಸಿಗುವ ಪುರಾತನ ಮತ್ತು ಆಧುನಿಕ ಬೊಂಬೆಲೋಕ ಕಣ್ಮನ ತಣಿಸುವಂತಹದ್ದು. ಮೈಸೂರಿನಲ್ಲಿ ಕಾಣಸಿಗುವ ಬಹುತೇಕ ಬೊಂಬೆಗಳು ಬೇರೆ ಬೇರೆ ಕಡೆಯಿಂದ ಇಲ್ಲಿಗೆ ಆಮದಾದವು. ಆದರೆ, ಮೈಸೂರಿನಲ್ಲಿ ಬಹು ಹಿಂದೆ, 1930ರ ದಶಕದಲ್ಲೇ ‘ಮೈಸೂರು ಟಾಯ್ಸ್’ ಎನ್ನುವ ಬೊಂಬೆ ತಯಾರಿಕೆಯ ಉದ್ಯಮ ರೂಪುಗೊಂಡಿತ್ತು. ಸ್ಥಳೀಯವಾಗಿ ಮಾತ್ರವಲ್ಲದೆ, ವಿದೇಶಗಳಲ್ಲೂ ‘ಮೈಸೂರು ಟಾಯ್ಸ್’ ಗೃಹ ಕೈಗಾರಿಕೆಯಲ್ಲಿ ಸಿದ್ಧಗೊಂಡ ವೈವಿಧ್ಯದ ಗೊಂಬೆಗಳು ಗಮನ ಸೆಳೆದಿದ್ದವು.

‘ಮೈಸೂರು ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್’ನಲ್ಲಿ ಕಲಿತ ಎಂ. ವೀರಪ್ಪ ನಾಡಿನ ಪ್ರಸಿದ್ಧ ಕಲಾವಿದರು. ಮೈಸೂರು ‘ಕಾವಾ’ದಲ್ಲಿ ಕಲಿತ ನಂತರ, ಮುಂಬೈನ ‘ಜೆ.ಜೆ. ಕಲಾ ಶಾಲೆ’ಯಲ್ಲಿ ಉನ್ನತ ವ್ಯಾಸಂಗ ಮಾಡಿದ ಅವರು ಕಾರ್ಯಕ್ಷೇತ್ರ ಮಾಡಿಕೊಂಡಿದ್ದು ಅರಮನೆ ನಗರಿ ಮೈಸೂರನ್ನು.

ಚಿತ್ರಕಲೆಯಲ್ಲಿ ಹೆಚ್ಚಿನ ಆಸಕ್ತಿ ಹೊಂದಿ, ಉತ್ತಮ ಕಲಾಕೃತಿಗಳನ್ನು ರಚಿಸುತ್ತಾ ಬಂದ ವೀರಪ್ಪನವರ ಕಲಾಕೌಶಲವನ್ನು ಕಲಾಸಕ್ತರು, ಹಿರಿಯ ಕಲಾವಿದರು ಬೆನ್ನು ತಟ್ಟಿ ಪ್ರೋತ್ಸಾಹಿಸಿದ ಕಾರಣದಿಂದಾಗಿ, ಮೈಸೂರಿನಲ್ಲಿ ಅವರು ‘ಕಲಾನಿಕೇತನ’ವನ್ನು (ಮುಂಬೈ ಆರ್ಟ್ಸ್ ಸ್ಟುಡಿಯೊ) ಆರಂಭಿಸಿದರು. ಚಿತ್ರಕಲೆಯಲ್ಲೇ ನಿರತರಾಗಿದ್ದ ವೀರಪ್ಪನವರು ನಗರದ